ದಿಃ 14-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಕೆ.ಎನ್.ಎಸ್. ರವರಿಂದಃ-**

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ಧ ಯಾವ ವಿಚಾರಕ್ಕಾಗಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಸಾಕ್ಷಿ ನುಡಿಯಲು ಯಾರು ನೋಟಿಸ್ ನೀಡಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನನ್ನ ತಕರಾರನ್ನು ಹಾಕಿರುವುದಿಲ್ಲ. ನಾನು ಯಾವ ಅಧಾರದ ಮೇಲಿಂದ ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೀರಾ ಮತ್ತು ಏತಕ್ಕಾಗಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿಯು ನನಗೆ ನನ್ನ ಭಾಗದ ಆಸ್ತಿ ಬೇಕು ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿ ಸಂಖ್ಯೆ ಹೇಳಲು ಬರುವುದಿಲ್ಲ. ನಾನು ಆಸ್ತಿಯ ಭಾಗವನ್ನು ಜಮೀನಿನಲ್ಲಿ ಕೇಳಿರುತ್ತೇನೆ. ನನಗೆ ಜಮೀನು ಆಸ್ತಿಗಳ ಸಂಖ್ಯೆ ಮಾತ್ರ ಗೊತ್ತು ಅದು 86/12 ಮತ್ತು 86/19, ಆದರೆ ನನಗೆ ಅದರ ಕ್ಷೇತ್ರದ ಬಗ್ಗೆ ಹೇಳಲು ಬರುವುದಿಲ್ಲ. ಸದರಿ ಜಮೀನುಗಳ ಉತಾರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸಾಕ್ಷಿಯನ್ನು ನಮ್ಮ ವಕೀಲರು ಹೇಳಿದ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ, ನಾನು ಸ್ವತಃ ಸಾಕ್ಷಿ ನುಡಿಯುತ್ತಿಲ್ಲ ಎಂದರೆ ಸರಿ.

**2.** ನಮ್ಮ ಸಹೋದರರು ಒಟ್ಟು 3 ಜನ, ಅದರಲ್ಲಿ ನಾನು, ಭೀಮರಾವ್, ಕಲ್ಲಪ್ಪ ಮತ್ತು ಶಂಕರ್. ದಿನಾಂಕ 02.07.2019 ರಂದು ನಾವು 4 ಜನ ಸಹೋದರರು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಮಾಡಿಕೊಂಡ ವಿಭಾಗದಂತೆ ಮ್ಯುಟೇಷನ್

ಸಂಖ್ಯೆ 986, ದಿನಾಂಕ 18.07.1992 ರಂತೆ ಡೈರಿಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮ್ಯುಟೇಷನನ್ನು ನಮಗೆ ನೋಟಿಸ್ ನೀಡಿದ ನಂತರ ನಮ್ಮ ಯಾವುದೇ ತಕರಾರು ಇಲ್ಲವೆಂದಾಗ ನಂತರ ಡೈರಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಮ್ಮ ವಿಭಾಗದಂತೆ ಸರ್ವೆ ನಂ .14/2 ರ ಆಸ್ತಿಯು ನನಗೆ ಮತ್ತು ಭೀಮರಾವ್ ರವರಿಗೆ ಭಾಗದ ಆಸ್ತಿಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಸರ್ವೆ ನಂ.20/20 ಮತ್ತು 20/14 ರ ಆಸ್ತಿಗಳೂ ಸಹ ನನ್ನ ಮತ್ತು ಭೀಮರಾವ್ ರವರ ಭಾಗಕ್ಕೆ ಜಂಟಿಯಾಗಿ ಬಂದಿರುತ್ತವೆ ಎಂದರೆ ಸರಿಯಲ್ಲ . ಅದೇ ರೀತಿ ಸರ್ವೆ ನಂ.13/3, 20/19, 86/12 ಮತ್ತು 86/19 ರ ಆಸ್ತಿಗಳು ಭೀಮರಾವ್ ರವರ ಭಾಗಕ್ಕೆ ಹೋಗಿರುತ್ತವೆ ಎಂದರೆ ಸರಿಯಲ್ಲ. ನಮ್ಮಿಬ್ಬರ ಭಾಗಾಂಶದ ಆಸ್ತಿಗಳಲ್ಲಿ ಕಲ್ಲಪ್ಪ ಮತ್ತು ಶಂಕರ್ ರವರು ತಮ್ಮ ಭಾಗದ ಹಿಸ್ಸೆಯ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1992 ರಿಂದ ವಾಟ್ನಿಯಾದ ಪ್ರಕಾರ ಎಲ್ಲಾ ಆಸ್ತಿಗಳ ಪಹಣಿಗಳು ಭೀಮರಾವ್ ರವರ ಹೆಸರಿನಲ್ಲಿ ಬರುತ್ತವೆ ಎಂದರೆ ಸಾಕ್ಷಿಯು ನಾವು ಶಾಲೆಯನ್ನು ಕಲಿತಿರುವುದಿಲ್ಲ, ಆಗಾಗಿ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. 1992 ರ ವಾಟ್ನಿಯನ್ನು ನ್ಯಾಯಾಲಯದಲ್ಲಿ ಸದರಿ ಮ್ಯುಟೇಷನ್ ಆದ ಕುರಿತು ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಕಲ್ಲಪ್ಪ ಎಂಬುವವರು ಮ್ಯುಟೇಷನ್ ಸಂಖ್ಯೆ 986 ನ್ನು ಪ್ರಶ್ನಿಸಿ ಸಹಾಯಕ ಕಮೀಷನರ್ ರವರ ಮುಂದೆ ಪ್ರಕರಣ ಸಂಖ್ಯೆ 91/2006 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಸಹಾಯಕ ಕಮೀಷನ್ ರವರು ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 06.10.2006 ರಂದು ಕಲ್ಲಪ್ಪ ರವರು ಪ್ರಕರಣ ಸಂಖ್ಯೆ 91/2006 ರಲ್ಲಿ ಆದ ಆದೇಶದ ವಿರುದ್ಧ ಆರ್.ಬಿ./ಆರ್.ಡಿ.ಎಸ್/246-

2006-07 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ನಂತರ ಸದರಿ ರಿವಿಷನ್ ಮೇಲ್ಮನವಿಯನ್ನು ದಿನಾಂಕ 18.11.2010 ರಂದು ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದೆಲ್ಲಾ ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. ರಿವಿಷನ್ ನಲ್ಲಿ ಆದ ಆದೇಶದ ಮೇಲೆ ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ದಾಖಲಿಸಿರುವುದಿಲ್ಲ ಎಂದರೆ ಸರಿ.

**3.** ದಾವಾ ಆಸ್ತಿಯಲ್ಲಿ ನಾವು ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ಏನು ಬೆಳೆಯನ್ನು ತೆಗೆಯುತ್ತೀರಾ ಎಂದರೆ ಸಾಕ್ಷಿಯು ಭತ್ತ ಮತ್ತು ಮೆಣಸಿನಕಾಯಿ ಬೆಳೆಯನ್ನು ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ನಾವು ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದೇವೆ ಎಂದು ತೋರಿಸಲು ತಲಾಟೆಯಿಂದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 1992 ರಿಂದ ದಾವಾ ಆಸ್ತಿಗಳಲ್ಲಿ ನಾವು ಯಾವುದೇ ಭತ್ತ ಮತ್ತು ಮೆಣಸಿನಕಾಯಿ ಬೆಳೆಯನ್ನು ಬೆಳೆಯದೆ ಇದ್ದರೂ ಬೆಳೆಯುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ಪಾಲು ಪಡೆದುಕೊಂಡು ಆಸ್ತಿಯನ್ನು ಪಡೆದಿದ್ದರೂ ವಾದಿಯರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**